**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-504/2022 **PW**-1

**ದಿಃ 12.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಃ1 ರಿಂದ 3 ಮತ್ತು 5 ರವರ ಪರ ಶ್ರೀ ಎನ್ ಜೆ ಎನ್ ವಕೀಲರಿಂದಃ**

**1.** ನನ್ನ ಜನ್ಮ ದಿನಾಂಕಃ28.01.1990 ಆಗಿರುತ್ತದೆ. ನಾನು 2014 ನೇ ಸಾಲಿನಲ್ಲಿ ಎನ್‌ರೋಲಮೆಂಟ ಮಾಡಿಸಿದ್ದು ಸುಮಾರು 11 ವರ್ಷಗಳಿಂದ ವಕೀಲ ವೃತ್ತಿ ಮಾಡುತ್ತಿದ್ದೇನೆ. ಸಂಗನಬಸಪ್ಪ ಇವರ ವಾರಸುದಾರರು ಯಾರು ಎಂದರೆ ಸಾಕ್ಷಿ ನಾಲ್ಕು ಜನ ವಾರಸಾದಾರರು ಇದ್ದು ಅವರೆಂದರೆ ಈರಮ್ಮ, ಗಂಗಾದರ, ಸೌಭಾಗ್ಯ ಮತ್ತು ಗಣೇಶ. 2022 ನೇ ಸಾಲಿನಲ್ಲಿ ನನ್ನ ತಾಯಿ ಈರಮ್ಮ ರವರು ಈ ದಾವೆಯನ್ನು ದಾಖಲು ಮಾಡಿದ್ದರು ಎಂದರೆ ಸರಿ. ದಾವಾ ದಾಖಲು ಮಾಡುವ ಸಮಯದಲ್ಲಿ ನನ್ನ ತಾಯಿಯ ಪರವಾಗಿ ನಾನೇ ವಕಾಲತ್ತ ಕೊಟ್ಟಿದ್ದೆ ಎಂದರೆ ಸರಿ. ವಾದಿ 3 ನನ್ನ ತಂಗಿ ಕೂಡಾ ವಕೀಲ ವೃತ್ತಿ ಮಾಡುತ್ತಿದ್ದಾರೆಂದರೆ ಸರಿ. ವಾದಿ 3 ಪಾರ್ಟಿ ಇನ್ ಪರ್ಸನ ಆಗಿ ಮತ್ತು ವಕೀಲರಾಗಿ ಕೂಡಾ ಕೇಸು ನಡೆಸುತ್ತಿದ್ದಾರೆಂದರೆ ಸರಿ. ಈ ಕೇಸನಲ್ಲಿ ವಾದಿ ಸಾಕ್ಷ್ಯಕ್ಕೆಂದು ನಿಗದಿಯಾದಾಗ ನಾವು ನಮ್ಮನ್ನು ಕೂಡಾ ಈ ಕೇಸನಲ್ಲಿ ಪಕ್ಷಗಾರರನ್ನಾಗಿ ಮಾಡಿ ನಾವೂ ಕೂಡಾ ಸಂಗನಬಸಪ್ಪ ರವರ ವಾರಸಾದಾರರು ಎಂದು ಅರ್ಜಿ ಕೊಟ್ಟೆವು ಎಂದರೆ ಸರಿ. ಈ ಕೇಸನಲ್ಲಿ ನನ್ನ ತಾಯಿಯ ಸಾಕ್ಷ್ಯ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಗೆ ಆರಾಮ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮಾನಸಿಕವಾಗಿ ಆರೋಗ್ಯದಿಂದ ಇದ್ದಾರೆಂದರೆ ಸರಿ. ಆದರೆ ಅವರಿಗೆ ಕಾಲು ನೋವು ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನ್ಯಾಯಾಲಯದಿಂದ ಆಯೋಜಕರನ್ನು ನೇಮಕ ಮಾಡಿ ನಮ್ಮ ತಾಯಿಯ ಸಾಕ್ಷ್ಯ ದಾಖಲೆ ಮಾಡಿಕೊಂಡು ಬರಲು ಏನೂ ತೊಂದರೆ ಇಲ್ಲ ಎಂದರೆ ಸಾಕ್ಷಿ ಏನೂ ತೊಂದರೆ ಇಲ್ಲ ಎನ್ನುತ್ತಾರೆ. ನನ್ನ ತಾಯಿಗೆ ಸದರಿ ದಾವಾ ಮುಂದುವರೆಸಲು ಇಷ್ಟ ಇರಲಿಲ್ಲ ಅದೇ ರೀತಿ ಮುಂದುವರೆದು ಅವರು ಸಾಕ್ಷ್ಯ ಕೊಡಲು ಕೂಡಾ ತಯಾರಿರಲಿಲ್ಲ ಆ ಕಾರಣಕ್ಕೆ ನಾವು ಅರ್ಜಿ ಸಲ್ಲಿಸಿ ಕಡತದ ಮೇಲೆ ಬಂದಿರುತ್ತೇವೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ.

2. ಪ್ರತಿವಾದಿ 3 ರವರು ನನ್ನ ಸಹೋದರತ್ತೆ ಎಂದರೆ ಸರಿ. ಸದರಿಯವರ ಒಡನಾಟ ನಮ್ಮ ಜೊತೆ ಚೆನ್ನಾಗಿದೆ ಎಂದರೆ ಸಾಕ್ಷಿ ನಮ್ಮ ಅವರ ಸಂಪರ್ಕವೇ ಇಲ್ಲ ಎನ್ನುತ್ತಾರೆ. ಪ್ರತಿವಾದಿ 3 ರವರ ನನ್ನ ತಂದೆಯ ಅಕ್ಕ ಎಂದರೆ ಸರಿ. ಅವರಿಗೆ ನನ್ನ ಅಜ್ಜನಕಾಲದಿಂದ ಏನೇನು ಆಗುಹೋಗುಗಳ ಬಗ್ಗೆ ಗೊತ್ತಿದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ.

3. ನಮ್ಮ ಮನೆತನಕ್ಕೆ ಕುಷ್ಟಗಿ ತಾಲೂಕು ಹನಮಸಾಗರ ಈ ಆಸ್ತಿ ಮಾತ್ರ ಹಿರಿಯರಿಂದ ಬಂದಿದ್ದು ಎಂದರೆ ಸಾಕ್ಷಿ ಶೆಡ್ಯೂಲ ಎ ಹಾಗೂ ಶೆಡ್ಯೂಲ ಬಿ ಐಟಂ ನಂಃ1 ಆಸ್ತಿ ಮಾತ್ರ ಎನ್ನುತ್ತಾರೆ. ಶಿವಸಂಗಪ್ಪ ಎನ್ನುವವರು ನನ್ನ ಅಜ್ಜ. ಶಿವಸಂಗಪ್ಪ ಇವರು ಗಾಂದಿಮಾರ್ಕೇಟನಲ್ಲಿ ಸ್ವಂತ ಬೆಲ್ಲದ ಅಂಗಡಿ ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದರು. ಸದರಿ ವ್ಯಾಪಾರದಿಂದ ಎಷ್ಟು ಆದಾಯ ಮತ್ತು ಖರ್ಚು ಇತ್ತು ಎಂಬ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಮಾಹಿತಿ ಇದೆ ಎನ್ನುತ್ತಾರೆ. ನನ್ನ ಅಜ್ಜ ಅಂಗಡಿಯ ಲೆಕ್ಕಪತ್ರವೆಲ್ಲವನ್ನು ಮೇಂಟೇನ ಮಾಡುತ್ತಿದ್ದರು ಎಂದರೆ ಸರಿ. ಅವುಗಳೆಲ್ಲ ಮುಖ್ಯವಾದ ಕಾಗದಪತ್ರಗಳೆಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವುಗಳನ್ನು ಹಾಜರುಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಅವುಗಳು ಇದ್ದ ಬಗ್ಗೆ ನಮಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ಅಜ್ಜನಿಗೆ ಇದ್ದಂತಹ ದುಡಿಮೆಯಿಂದ ಅವರ ಕುಟುಂಬಕ್ಕೆ ಅಂದರೆ ಆರು ಮಂದಿ ಮಕ್ಕಳು ಹಾಗೂ ಗಂಡ ಹೆಂಡತಿ ಇವರ ಜೀವನಕ್ಕೆ ಸಾಕಾಗುತ್ತಿರಲಿಲ್ಲ ಎಂದರೆ ಸಾಕ್ಷಿ ಸಾಕಾಗುತ್ತಿತ್ತು ಎನ್ನುತ್ತಾರೆ. ಶೆಡ್ಯೂಲ ಎ ಆಸ್ತಿಯ ಖರೀದಿ ಪತ್ರ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಅದರಲ್ಲಿ ನನ್ನ ಅಜ್ಜನ ಹೆಸರು ಕೂಡಾ ಇದೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ಅಜ್ಜನ ಹೆಸರು ಅಲ್ಪವಯಿ ಸಂರಕ್ಷಣದಾರ ಎಂಬುದಾಗಿ ಇದೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ದುಡಿಮೆಗೋಸ್ಕರ ಬಳಪ ಮತ್ತು ಉಪ್ಪು ಇವುಗಳನ್ನು ಮಾರಾಟ ಮಾಡುತ್ತಿದ್ದರೆಂದರೆ ಸಾಕ್ಷಿ ಅದೆಲ್ಲಾ ಸುಳ್ಳು ಎನ್ನುತ್ತಾರೆ. 1 ನೇ ಪ್ರತಿವಾದಿ ಆ ದುಡಿಮೆಯಿಂದ ಬಂದಂತಹ ಹಣದಿಂದ ಶೆಡ್ಯೂಲ ಎ ಆಸ್ತಿಯನ್ನು ಗಳಿಸಿರುತ್ತಾರೆಂದರೆ ಸಾಕ್ಷಿ ಅದೆಲ್ಲಾ ಸುಳ್ಳು ಎನ್ನುತ್ತಾರೆ. 1970 ರಲ್ಲಿ ಒಂದು ಸಾವಿರ ರೂ ಎಂದರೆ ಈಗಿನ 10 ಲಕ್ಷ ರೂ ಗಳಿಗೆ ಸಮ ಎಂದರೆ ಸಾಕ್ಷಿ ಅಷ್ಟು ಆಗುತ್ತಿರಲಿಲ್ಲ ಎನ್ನುತ್ತಾರೆ. ನಿಮ್ಮ ಪ್ರಕಾರ ಎಷ್ಟಾಗುತ್ತದೆಂದರೆ ಸಾಕ್ಷಿ ಹೇಳಲು ಆಗುವದಿಲ್ಲ ಎನ್ನುತ್ತಾರೆ. ಆಗಿನ ಕಾಲಕ್ಕೆ ಒಂದು ಸಾವಿರ ರೂ ಎಂದರೆ ದೊಡ್ಡ ಮೊತ್ತ ಎಂದರೆ ಸಾಕ್ಷಿ ಆಗ ಏನಿತ್ತೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ನನ್ನ ಅಜ್ಜ ಒಂದು ಸಾವಿರ ರೂ ಗಳನ್ನು ಎಲ್ಲಿಂದ ತಂದು ಕೊಟ್ಟರು ಎಂದು ಹೇಳಲು ಆಗುತ್ತಿದೆಯಾ ಎಂದರೆ ಸಾಕ್ಷಿ ನನ್ನ ತಂದೆಯವರು ಅವರ ಅಂಗಡಿಯಲ್ಲಿ ದುಡಿದು ತಂದ ಹಣದಿಂದ ಆಸ್ತಿ ಖರೀದಿ ಮಾಡಿದರೆಂದು ಹೇಳಿದ್ದರು ಎಂದು

ನುಡಿಯುತ್ತಾರೆ. ನನ್ನ ತಾಯಿಯವರು ಮೊದಲಿನಿಂದಲೂ ಗೃಹಿಣಿ ಇದ್ದು ಅವರಿಗೆ ಯಾವದೇ ಬೇರೆ ಆದಾಯದ ಕೆಲಸ ಇರಲಿಲ್ಲ ಎಂದರೆ ಸರಿ. ನನ್ನ ತಾಯಿಯ ತವರುಮನೆ ಕಡೆಯಿಂದ ಅಷ್ಟೇನೂ ಆರ್ಥಿಕವಾಗಿ ಶ್ರೀಮಂತರಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಹೊಲ ಮನೆ ಎಲ್ಲವೂ ಇವೆ ಎನ್ನುತ್ತಾರೆ. ನನ್ನ ತಾಯಿಗೆ ಅವರ ತವರು ಮನೆಯವರು ಆರ್ಥಿಕವಾಗಿ ಏನನ್ನೂ ಸಹಾಯ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದಾರೆ ಎನ್ನುತ್ತಾರೆ. ಸಹಾಯ ಮಾಡಿದ ಬಗ್ಗೆ ಕಾಗದ ಪತ್ರಗಳು ನಿಮ್ಮ ಕಡೆ ಇದೆಯಾ ಎಂದರೆ ಸಾಕ್ಷಿ ಕಾಗದ ಪತ್ರಗಳು ಇಲ್ಲ ಎನ್ನುತ್ತಾರೆ.

4. ನನ್ನ ಅಜ್ಜ 2002 ರಲ್ಲಿ ಮರಣ ಹೊಂದಿರುತ್ತಾರೆ. 1989 ರಿಂದಲೇ ನಾವು ನನ್ನ ತಂದೆ ತಾಯಿ ಎಲ್ಲರೂ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಬಿಸಿದೆವು ಎಂದರೆ ಸರಿ. ನನ್ನ ಅಜ್ಜಯಾಗಲಿ ನನ್ನ ತಂದೆಯಾಗಲಿ ತಮ್ಮ ಜೀವಿತಾ ಅವದಿಯಲ್ಲಿ ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂಬ ಬಗ್ಗೆ ಎಲ್ಲಿಯೂ ದಾವೆ ಹೂಡಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಆದರೆ ಅದು ಪಿತ್ರಾರ್ಜಿತ ಆಸ್ತಿ ಎಂದು ನನ್ನ ತಂದೆ ನನಗೆ ಹೇಳಿದ್ದರು ಎನ್ನುತ್ತಾರೆ. ನನ್ನ ತಂದೆ ದಿಃ08.09.2016 ರಂದು ಮರಣ ಹೊಂದಿರುತ್ತಾರೆಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ನಮಗೆ ಸದರಿ ಆಸ್ತಿ ಪ್ರತಿವಾದಿ 1 ರವರ ಸ್ವಂತ ಆಸ್ತಿ ಎಂದು ಹೇಳುತ್ತಿದ್ದರು ಎಂದರೆ ಸಾಕ್ಷಿ ಹಾಗೇನೂ ಹೇಳಿಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಮತ್ತು 5 ರವರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**